ಸಂಯುಕ್ತ ಕರ್ನಾಟಕ
ಶುಕ್ರವಾರ 20 ಸೆಪ್ಟೆಂಬರ್ 2024


# ನವೆಂಬರ್‌ನಲ್ಲಿ ಕೃಷಿ ಮೇಳ

**ಬೆಂಗಳೂರು:** ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ವತಿಯಿಂದ ನವೆಂಬರ್ ತಿಂಗಳಲ್ಲಿ ಪ್ರಸಕ್ತ ಸಾಲಿನ 'ಬೃಹತ್ ಕೃಷಿ ಮೇಳ 2024' ಆಯೋಜಿಸಲಾಗಿದೆ.

ಈ ಮೇಳದಲ್ಲಿ ರೈತರ ಆದಾಯ ಹೆಚ್ಚಿಸುವ ಹೊಸ ಹೊಸ ಬೀಜ ತಳಿ ಬಿಡುಗಡೆ ಆಗಲಿವೆ. ಕೃಷಿ ತಾಂತ್ರಿಕ ಸಲಕರಣೆಗಳು ಪರಿಚಯಗೊಳ್ಳಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮೇಳ ಉದ್ಘಾಟಿಸುವ ಸಾಧ್ಯತೆ ಇದೆ.

ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಮೂರು ದಿನ ರೈತರ ಜಾತ್ರೆ ರೀತಿಯಲ್ಲಿ ಈ ಕೃಷಿ ಮೇಳ ನಡೆಯುತ್ತದೆ. ಈ ಬಾರಿ 'ಹವಾಮಾನ ಚತುರ ಡಿಜಿಟಲ್ ಕೃಷಿ' ಎಂಬ ಘೋಷವಾಕ್ಯದೊಂದಿಗೆ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಜಿಕೆವಿಕೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೆಕ್ಕೆಜೋಳ, ಸೂರ್ಯಕಾಂತಿ ಹೊಸ ತಳಿ ಬಿಡುಗಡೆ ಇನ್ನೂ ಈ ಮೇಳದಲ್ಲಿ ವಿಶೇಷವಾಗಿ ಅಧಿಕ ಇಳುವರಿ ಕೊಡುವ ನಾಲ್ಕು ಮೆಕ್ಕೆಜೋಳ ತಳಿಗಳನ್ನು ಬಿಡುಗಡೆ ಮಾಡಲಾಗುತ್ತದೆ. ಇದರೊಂದಿಗೆ ಅಲಸಂಧಿ, ಜೋಳ, ಸೋರ್ಯಕಾಂತಿ ಹೊಸ ತಳಿಗಳು ಲೋಕಾರ್ಪಣೆಗೊಳ್ಳಲಿವೆ. ಅಲ್ಲದೇ ಕಳೆದ ನಿರ್ಮೂಲನೆ, ಕೀಟ ಹತೋಟಿಗೆ ಇಟ್ಟುಕೊಳ್ಳಬಹುದಾದ ತಾಂತ್ರಿಕತೆಗಳು ರೈತರಿಗೆ ಪರಿಚಿತಗೊಳ್ಳಲಿವೆ. ಅಗತ್ಯ ಸಲಹೆ ಸೂಚನೆಗಳು ರೈತರಿಗೆ ಈ ಮೇಳದಿಂದ ಸಿಗಲಿವೆ. ಹಸು, ಹೋರಿ ತಳಿಗಳನ್ನು ಖರೀದಿಸಬಹುದು. ಹೈನುಗಾರಿಕೆ, ತೋಟಗಾರಿಕೆಗೆ ಇನ್ನಿತರ ವಾಣಿಜ್ಯ ಬೆಳೆಗಳಿಗೆ ಉಪಯುಕ್ತ ಸಲಹೆಗಳು ಇಲ್ಲಿ ನೀಡಲಾಗುತ್ತಿದೆ. ಇನ್ನೂ ಕೃಷಿ ವಲಯದಲ್ಲಿ ಅಸಾಧಾರಣ ಸಾಧನೆ ಮಾಡಿದವರನ್ನು ವಿಶ್ವವಿದ್ಯಾಲಯ ಇದೇ ವೇಳೆ ಸನ್ಮಾನಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಗೊಬ್ಬರದ ಕೂರಿಗೆ ಸಂಶೋಧನೆ

ಸುಧಾರಿತ ಬೇಸಾಯ ವ್ಯವಸ್ಥೆಗೆ ಆದ್ಯತೆ ವಿಶ್ವವಿದ್ಯಾಲಯವು ಸುಧಾರಿತ ಕೃಷಿ ವ್ಯವಸ್ಥೆ ಆದ್ಯತೆ ನೀಡುತ್ತಿದೆ. ಹೊಸ ಹೊಸ ತಂತ್ರಜ್ಞಾನಗಳ ಆವಿಷ್ಕಾರ ಮಾಡಿ ರೈತರಿಗೆ ಪರಿಚಯ ಮಾಡುತ್ತಿದೆ. 19 ಹೊಸ ತಾಂತ್ರಿಕತೆಗಳನ್ನು ವಿವಿ ಶೋಧಿಸಿದೆ. ಕೈ ಚಾಲಿತರಾಗಿ, ಗೊಬ್ಬರದ ಕೂರಿಗೆ ಸಂಶೋಧಿಸಿದೆ. ಇದರಿಂದ 1.5 ಎಕರೆ ಭೂಮಿಯನ್ನು ಇಬ್ಬರೇ ಬಿತ್ತನೆ ಮಾಡಬಹುದು. ಅದೇ ರೀತಿ ಶೇಂಗಾವನ್ನು ಗಿಡದಿಂದ ಬೇರ್ಪಡಿಸುವ ಯಂತ್ರವನ್ನು ಆವಿಷ್ಕರಿಸಿದೆ. ಶೇಂಗಾ ಜೊತೆಗೆ ಸೂರ್ಯಕಾಂತಿ, ಮೆಕ್ಕಜೋಳ ಬೀಜಗಳನ್ನು ಬೇರ್ಪಡಿಸಲು ಈ ಯಂತ್ರಗಳನ್ನು ಬಳಸಬಹುದು.

SamyukthaKarnataka Pg.03

# ಅಂತಾರಾಷ್ಟ್ರೀಯ ಗುಲಾಬಿ ದಿನ

**ಬೆಂಗಳೂರು:** ಶ್ರೀ ಶಂಕರ್ ಕ್ಯಾನ್ಸರ್ ಫೌಂಡೇಶನ ವತಿಯಿಂದ ಸೆ.22ರಂದು ಬಸವನಗುಡಿಯಲ್ಲಿ ಕ್ಯಾನ್ಸರ್ ಯೋಧರೊಂದಿಗೆ ಅಂತಾರಾಷ್ಟ್ರೀಯ ಗುಲಾಬಿ ದಿನವನ್ನು ಆಚರಿಸಲಾಗುತ್ತದೆ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಶಶಿರೇಖಾ ಹೇಳಿದರು.ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ನಡೆಯುವ ಕಾರ್ಯಕ್ರಮವು ಶಸ್ತ್ರಚಿಕಿತ್ಸಾ ಆಂಕೊಲಾಜಿಸ್ಟ್ ಬಿ.ಎಸ್ ಶ್ರೀನಾಥ ನೇತೃತ್ವದಲ್ಲಿ ನಡೆಯಲಿದೆ. ಪ್ರಪಂಚದಾದ್ಯಂತ ಧೈರ್ಯಶಾಲಿ ಕ್ಯಾನ್ಸರ್ ಬದುಕುಳಿದವರಿಗೆ ಸಮರ್ಪಿತವಾದ ರೋಸ್ ದಿನವನ್ನು ವಿಶ್ವಾದ್ಯಂತ ಆಚರಿಸಲಾಗುತ್ತಿದ್ದು ಕ್ಯಾನ್ಸರ್ ಪೀಡಿತ ರೋಗಿಗಳಿಗೆ ಮತ್ತು ಅವರ ಕುಟುಂಬ ಸದಸ್ಯರಿಗೆ ಆತ್ಮಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.



SamyukthaKarnataka Pg.03

# ಕೃಷಿ ಕ್ಷೇತ್ರಕ್ಕೆ ಹೆಚ್ಚು ಆದ್ಯತೆ

ಬೆಂಗಳೂರು: ರಾಷ್ಟ್ರದಲ್ಲಿ ಕೃಷಿ ಕ್ಷೇತ್ರದ ಬೆಳವಣಿಗೆಗೆ ಕೇಂದ್ರ ಸರ್ಕಾರ ಹೆಚ್ಚಿನ ಒತ್ತು ನೀಡಿದೆ. ರೈತರು ಹಾಗೂ ಕೃಷಿ ಉತ್ಪನ್ನಗಳ ಕಂಪನಿಗಳಿಗೆ ಉತ್ತೇಜನ ನೀಡಲು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ ಎಂದು ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ನಡೆದ ಮಲ್ಟಿಪ್ಲೆಕ್ಸ್ ಸಂಸ್ಥೆಯ ಸುವರ್ಣ ಮಹೋತ್ಸವದಲ್ಲಿ ಮಾತನಾಡಿದ ಅವರು, ಸರ್ಕಾರದ ಜೊತೆ ಸರ್ಕಾರೇತರ ಕೃಷಿ ಉತ್ಪನ್ನಗಳ ಕಂಪನಿಗಳು ದೇಶದ ಕೃಷಿ ವಲಯವನ್ನು ಜಾಗತಿಕವಾಗಿ ಅಭಿವೃದ್ಧಿ ಪಡಿಸುವಲ್ಲಿ ಶ್ರಮಿಸುತ್ತಿವೆ ಹಾಗೂ ರೈತರಿಗೆ ಅಗತ್ಯವಾದ ಮಾರುಕಟ್ಟೆಗಳನ್ನು ಕಲ್ಪಿಸುತ್ತಿವೆ. ಅಲ್ಲದೆ ವಿಶ್ವವಿದ್ಯಾನಿಲಯಗಳು ವಿವಿಧ ಸಂಶೋಧನೆಗಳನ್ನು ಕೈಗೊಂಡಿವೆ ಎಂದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರ ಉತ್ತಮ ಸಹಯೋಗದೊಂದಿಗೆ ಕೃಷಿ ಪ್ರಗತಿಗಾಗಿ ಅಭಿವೃದ್ಧಿದಾಯಕ ಯೋಜನೆಗಳನ್ನು ರೂಪಿಸಿವೆ. ರೈತರ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸುತ್ತಿವೆ. ಕೃಷಿ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಖಾಸಗಿ ಸಂಸ್ಥೆಗಳು ಕೃಷಿಯನ್ನು ಆಧುನೀಕರಣಗೊಳಿಸಿ ರೈತರ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ವ್ಯವಸ್ಥೆ ಹಾಗೂ ಉತ್ತಮ ಬೆಲೆ ದೊರೆಯಲು ಸಹಕರಿಸುತ್ತಿವೆ ಎಂದು ತಿಳಿಸಿದರು.ಮಲ್ಟಿಪ್ಲೆಕ್ಸ್ ಸಂಸ್ಥೆ ರಾಸಾಯನಿಕ ಉತ್ಪನ್ನಗಳಲ್ಲದೆ ಗುಣಮಟ್ಟದ ಪರಿಸರಸ್ನೇಹಿ, ಬಹು ಉಪಯೋಗಿ ಜೈವಿಕ ಗೊಬ್ಬರ ಉತ್ಪಾದಿಸುತ್ತಾ ಬಂದಿರುವುದು ಉದ್ಯಮದಲ್ಲಿ ಯಶಸ್ಸಿಗೆ ಕಾರಣವಾಗಿದೆ. ಇದೇ ಕಾರಣಕ್ಕಾಗಿ ಈ ಸಂಸ್ಥೆಯ ಪ್ರಯೋಗಾಲಯಗಳಿಗೆ ಎನ್‌ಎಬಿಎಲ್ ಮಾನ್ಯತೆ ಕೂಡ ಸಿಕ್ಕಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಕೃಷಿ ಕ್ಷೇತ್ರ ಅಭ್ಯುದಯಕ್ಕೆ ಹತ್ತಾರು ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಿದೆ. ಕೃಷಿ, ಯಾಂತ್ರೀಕರಣ ಹಾಗೂ ತಂತ್ರಜ್ಞಾನದ ವರ್ಗಾವಣೆಗೆ ಆದ್ಯತೆ ನೀಡಿದೆ. ಕಳೆದ ವರ್ಷ ಸುಮಾರು 1 ಸಾವಿರ ಕೋಟಿ ರೂ.ಗಳನ್ನು ಇದಕ್ಕಾಗಿ ವೆಚ್ಚ ಮಾಡಲಾಗಿದೆ ಎಂದರು.

VijayaKarnataka Pg.05

ರಾಗಿ ಬೆಳೆಯುವ ಜಿಲ್ಲೆಗಳಲ್ಲಿ ಶೇ.50 ಮಳೆ ಇಲ್ಲ | 8 ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಕೃಷಿ

# ಮಳೆ ಕೊರತೆ: ರಾಗಿ, ಶೇಂಗಾ ಬೆಳೆಗೆ ನೀರಿಲ್ಲ

■ ಆದರ್ಶ ಕೋಡಿ ಬೆಂಗಳೂರು ಗ್ರಾಮಾಂತರ
adarshkodi15@gmail.com

ರಾಜ್ಯದಲ್ಲಿ ರಾಗಿ ಬೆಳೆಗೆ ಮಳೆ ಕೊರತೆ ಕಾಡುತ್ತಿದೆ. ಸಸಿ ಹಂತದಲ್ಲಿರುವ ರಾಗಿಗೆ ಮಳೆ ಅಗತ್ಯವಾಗಿದೆ. ಆದರೆ ಅಗತ್ಯಕ್ಕೆ ತಕ್ಕಂತೆ ಮಳೆ ಇಲ್ಲದಿರುವುದರಿಂದ ವಿವಿಧ ಜಿಲ್ಲೆಗಳಲ್ಲಿ ರಾಗಿ ಸಸಿಗಳು ಒಣಗಲು ಶುರುವಾಗಿವೆ.

ರಾಜ್ಯದಲ್ಲಿ ರಾಗಿ ಹೆಚ್ಚಾಗಿ ಬೆಳೆಯುವ ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ತುಮಕೂರು, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ಕಳೆದ ಅನೇಕ ದಿನಗಳಿಂದ ವಾಡಿಕೆಗಿಂತ ಕಡಿಮೆ ಮಳೆಯಾಗುತ್ತಿದೆ. ಕಳೆದ ವರ್ಷದ ಬರದಿಂದ ಭೂಮಿಯಲ್ಲಿ ತೇವಾಂಶ ಕುಸಿತವಾಗಿದೆ. ಪ್ರಸಕ್ತ ವರ್ಷ ಪೂರ್ವ ಮುಂಗಾರು ಉತ್ತಮವಾಗಿದ್ದ ಹಿನ್ನಲೆ ಬಿತ್ತನೆ ಚುರುಕು ಪಡೆದುಕೊಂಡಿತ್ತು. ಬಹುತೇಕ ಜಿಲ್ಲೆಗಳಲ್ಲಿ ಶೇ.90ಕ್ಕೂ ಹೆಚ್ಚಿನ ಬಿತ್ತನೆ ಪೂರ್ಣಗೊಂಡು ರಾಗಿ ಸಸಿಗಳು ಉತ್ತಮವಾಗಿದ್ದವು. ಆದರೆ ಈಗ ಮಳೆ ಕೊರತೆ ಕಾಡುತ್ತಿದ್ದು, ಸಸಿಗಳು ಒಣಗುತ್ತಿವೆ. ರಾಜ್ಯದಲ್ಲಿ 8 ಲಕ್ಷ ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ರಾಗಿ ಬೆಳೆಯಲಾಗುತ್ತಿದ್ದು, ಈ ವರ್ಷ ಕೂಡ ಫಸಲು ಇಳಿಕೆ ಕಾಣುವ ಸಾಧ್ಯತೆಯಿದೆ.

**ತೆನೆ ಕಟ್ಟುವ ಸಮಯ:** ರಾಗಿ ಬೆಳೆ ಈಗ ಸಸಿ ಹಂತದಲ್ಲಿದೆ. ಈ ವೇಳೆ ಸಸಿಗಳು ಬೆಳವಣಿಗೆ ಹೊಂದಿ ತೆನೆ ಕಟ್ಟಲು ಮಳೆ ಅಗತ್ಯವಾಗಿದೆ. ಆದರೆ ಈ ವರ್ಷ ರಾಗಿ ಬೆಳೆಯುವ ಜಿಲ್ಲೆಗಳಲ್ಲಿ ಕಳೆದ 15 ದಿನಗಳಿಂದ ಮಳೆ ವಾಡಿಕೆಗಿಂತ ಶೇ.50ಕ್ಕೂ ಹೆಚ್ಚಾಗಿ ಕೊರತೆಯಾಗಿದೆ. ಇದರ ಪರಿಣಾಮವಾಗಿ ರಾಗಿ ಕೆಲವೆಡೆ ಬೆಂಕಿ ರೋಗಕ್ಕೆ ತುತ್ತಾಗುತ್ತಿದೆ. ಇನ್ನು ಕೆಲವೆಡೆ ಸಸಿಗಳ ಬೆಳವಣಿಗೆಯಲ್ಲಿ ಕುಂಠಿತವಾಗುತ್ತಿದೆ. ಮಳೆ ಕೊರತೆ ಇನ್ನೂ ಕೆಲ ದಿನ ಮುಂದುವರಿದರೆ ಫಸಲಿನಲ್ಲೂ ಇಳಿಕೆಯಾಗುವ ಸಂಭವವಿದೆ.

**ಕಳೆದ 15-20 ದಿನಗಳಿಂದ ಮಳೆ ಕೊರತೆ ಕಾಡುತ್ತಿದ್ದು, ರಾಗಿ ಸಸಿಗಳಿಗೆ ಹಾನಿಯಾಗುತ್ತಿದೆ. ಮಳೆ ಕೊರತೆ ಮುಂದುವರಿದರೆ ಫಸಲಿಗೆ ಹೊಡೆತ ಬೀಳಲಿದೆ.**

-**ಗಾಯತ್ರಿ** ಉಪನಿರ್ದೇಶಕಿ, ಕೃಷಿ ಇಲಾಖೆ

1,01,018 ಹೆಕ್ಟೇರ್ ಶೇಂಗಾ ಬಿತ್ತನೆ

ಅಗತ್ಯ ತೇವಾಂಶದ ಕೊರತೆ



ಒಣಗುವ ಹಂತ ತಲುಪಿದ ರಾಗಿ ಸಸಿಗಳು.

**8,63,516** ಹೆಕ್ಟೇರ್ ರಾಜ್ಯದ ಒಟ್ಟು ರಾಗಿ ವ್ಯಾಪ್ತಿ

**11,27,140** ಟನ್ ವಾರ್ಷಿಕ ರಾಗಿ ಉತ್ಪಾದನೆ

**ರಾಗಿ ಸಸಿಗಳು ಈಗಾಗಲೇ ಒಣಗಲು ಶುರುವಾಗಿದೆ. ಕಳೆದ ವರ್ಷ ಬರದಿಂದ ಸಂಕಷ್ಟ ಉಂಟಾಗಿತ್ತು. ಈ ವರ್ಷ ಕೂಡ ಉತ್ತಮ ಫಸಲಿನ ನಿರೀಕ್ಷೆ ಹುಸಿಯಾಗುವ ಸಾಧ್ಯತೆಯಿದೆ.**

- **ಕೇಶವ್‌ಮೂರ್ತಿ** ರೈತ, ನಾಗದೇನಹಳ್ಳಿ

### ಸವಾಲುಗಳು?

- ಒಣಗುತ್ತಿರುವ ರಾಗಿ ಸಸಿಗಳು
- ಮಳೆ ಕೊರತೆಯಿಂದ ಫಸಲು ಕುಸಿಯುವ ಭೀತಿ
- ಬರದ ಎಫೆಕ್ಟ್‌ಗೆ ಕುಸಿದ ಭೂಮಿಯ ತೇವಾಂಶ
- ಸಸಿಗಳ ಬೆಳವಣಿಗೆಗೂ ಸಮಸ್ಯೆ

## ಶೇಂಗಾ ಬೆಳೆಗೆ ತೇವಾಂಶ ಯಾತಕ್ಕೂ ಸಾಲದು

■ ಎಂ.ಎಸ್. ಅಹೋಬಳಪತಿ ಚಿತ್ರದುರ್ಗ
Ahobalapathy.Narayanappa@timesgroup.com

ಜಿಲ್ಲೆಯ ಮಳೆಯಾಶ್ರಿತ ಪ್ರಮುಖ ವಾಣಿಜ್ಯ ಬೆಳೆ ಶೇಂಗಾ ಮಳೆಯ ಕೊರತೆಯಿಂದ ನಷ್ಟದ ಸುಳಿಗೆ ಸಿಲುಕುವ ಆತಂಕ ಎದುರಾಗಿದೆ. ಈಗ ಮಳೆ ಕೊರತೆಯಿಂದ ಒಣಹವೆ ಮುಂದುವರಿದಿದೆ. ಅಲ್ಲಲ್ಲಿ ತುಂತುರು ಮಳೆಯಾಗಿದ್ದರೂ, ಬೆಳೆಯ ಬೆಳವಣಿಗೆಗೆ ಅಗತ್ಯವಾದಷ್ಟು ತೇವಾಂಶ ಲಭ್ಯವಾಗಿಲ್ಲ.

ಈ ವರ್ಷ ಶೇಂಗಾ ಬಿತ್ತನೆ ನಂತರ ಮಳೆಯಾಗಿದ್ದರಿಂದ ಬೆಳೆಗಾರರು ಭರವಸೆಯಲ್ಲಿದ್ದರು. ಆದರೆ 20 ದಿನಗಳಿಂದ ಶೇಂಗಾ ಬೆಳೆಯುವ ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು ತಾಲೂಕುಗಳಲ್ಲಿ ಮಳೆ ಪೂರ್ಣ ಪ್ರಮಾಣದಲ್ಲಿ ಕಡಿಮೆಯಾಗಿರುವುದು ರೈತರ ಆತಂಕ ಹೆಚ್ಚಿಸಿದೆ.

ಕಳೆದ ವರ್ಷ ಕೂಡಾ ರೈತರು ಶೇಂಗಾ ಬೆಳೆಯಲ್ಲಿ ನಷ್ಟ ಅನುಭವಿಸಿದ್ದರು. ಶೇಂಗಾ ಕಾಯಿಗಟ್ಟಿ ಬೀಜ ಸದೃಢವಾಗುವ ಸಮಯದಲ್ಲೇ ಮಳೆ ಕೈಕೊಟ್ಟಿತ್ತು. ಈಗಲೂ ಶೇಂಗಾದಲ್ಲಿ ಕಾಯಿಗಳು ಬಂದಿವೆ. ಆದರೆ, ಕಾಯಿಯೊಳಗಿನ ಬೀಜ ಬಲಿತು, ಸದೃಢಗೊಳ್ಳಲು ತೇವಾಂಶ ಬೇಕು. ಇಲ್ಲವಾದಲ್ಲಿ ಕಾಯಿಗಳು ಜೊಳ್ಳಾಗುತ್ತವೆ. ಇದು ಒಟ್ಟಾರೆ ಇಳುವರಿ, ತೂಕ, ಮಾರುಕಟ್ಟೆ ಬೆಲೆ ಎಲ್ಲದರ ಮೇಲೂ ಪರಿಣಾಮ ಬೀರಲಿದೆ.

**ಇನ್ನೂ ಭರವಸೆ ಇದೆ:** ತಕ್ಷಣ ಮಳೆ ಬಂದಲ್ಲಿ ಬೆಳೆ ಚೇತರಿಸಿಕೊಳ್ಳುವ ಭರವಸೆಯಲ್ಲಿ ರೈತರು ಇದ್ದಾರೆ. ಎಷ್ಟು ಬೇಗ ಬಂದರೆ ಅಷ್ಟು ಬೆಳೆ ಖಾತ್ರಿ ಇದೆ. ಎಷ್ಟು ತಡವಾದರೆ ಅಷ್ಟು ನಷ್ಟದ ಬಾಬ್ತು ಹೆಚ್ಚಲಿದೆ.

ಜಿಲ್ಲೆಯಲ್ಲಿ ಈ ಬಾರಿ 1,01,018 ಹೆಕ್ಟೇರ್ ಶೇಂಗಾ ಬಿತ್ತನೆಯಾಗಿದೆ. ಕೃಷಿ ಇಲಾಖೆ ಅಂದಾಜಿನ ಪ್ರಕಾರವೇ ಒಂದು ಹೆಕ್ಟೇರ್ ಶೇಂಗಾ ಕೃಷಿಗೆ 30 ರಿಂದ 40 ಸಾವಿರದ ತನಕ ಖರ್ಚಾಗುತ್ತದೆ.

## ಮಳೆಗಾಗಿ ಗಂಡು ಮಕ್ಕಳಿಗೆ ಮದುವೆ



ಮಳೆಗಾಗಿ ಗ್ರಾಮಸ್ಥರು, ಇಬ್ಬರು ಬಾಲಕರಿಗೆ ಮದುವೆ ಮಾಡಿಸಿ ಪ್ರಾರ್ಥನೆ ಸಲ್ಲಿಸಿದರು.

■ ವಿಕ ಸುದ್ದಿಲೋಕ ದೊಡ್ಡಬಳ್ಳಾಪುರ(ಬೆಂ.ಗ್ರಾಮಾಂತರ)

ಮಳೆ ಕೈ ಕೊಟ್ಟಾಗ ಮಳೆಗಾಗಿ ಕಪ್ಪೆ ಮದುವೆ, ಕತ್ತೆ ಮದುವೆ ಮಾಡುವುದು ಸಾಮಾನ್ಯ. ಆದರೆ, ತಾಲೂಕಿನ ಸಾಸಲು ಹೋಬಳಿ ಪಚ್ಚಾರ್ಲಹಳ್ಳಿಯಲ್ಲಿ ಗ್ರಾಮ ಸ್ಥರು ಮಂಗಳವಾರ ರಾತ್ರಿ ಮಕ್ಕಳ ಮದುವೆ ಮಾಡಿ ಮಳೆಗಾಗಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಅಂದಹಾಗೆ ಹುಡುಗ- ಹುಡುಗಿಯನ್ನು ಮದುವೆ ಮಾಡಲಿಲ್ಲ, ಹುಡುಗನಿಗೆ ಹುಡುಗಿ ವೇಷ ಹಾಕಿಸಿ ಅಣುಕು ಮದುವೆ ಮಾಡಿ ಸಂಭ್ರಮಿಸಿ ದರು. ಇಬ್ಬರು ಬಾಲಕರನ್ನು ಕುರ್ಚಿಯಲ್ಲಿ ಕುಳ್ಳಿರಿಸಿ ಆರತಕ್ಷತೆ ಮಾಡಿದರು. ಗ್ರಾಮದ ಮಹಿಳೆಯರು ಆರತಿ ಎತ್ತಿ ಶುಭ ಹಾರೈಸಿದರು. ಕೆಲವರು ಮುಯ್ಯಿ ಮಾಡಿ ವರನಿಂದ ವಧುವಿನ ಹೆಸರು, ವಧುವಿನಿಂದ ವರನ ಹೆಸರು ಹೇಳಿಸಿ ಖುಷಿ ಪಟ್ಟರು. ಅಜ್ಜಿಯಂದಿರು ಸೋಬಾನೆ ಪದ ಹಾಡಿದರೆ, ಹುಡುಗಿಯರು ಡ್ಯಾನ್ಸ್ ಮಾಡಿ ಮದುವೆ ಕಳೆ ಹೆಚ್ಚಿಸಿದರು.

ರಾತ್ರಿ 8ಕ್ಕೆ ಆರಂಭವಾದ ಮದುವೆ ಶಾಸ್ತ್ರ ಮಧ್ಯರಾತ್ರಿವರೆಗೆ ನಡೆಯಿತು. ಮದುವೆಗೆ ಬಂದಿದ್ದ ಮುತ್ತೈದೆಯರಿಗೆ ಅರಿಶಿಣ, ಕುಂಕುಮ ನೀಡಿದರು. ಎಲ್ಲರಿಗೂ ಪಾಯಸದಡಿಗೆ ಊಟ ಬಡಿಸ ಲಾಯಿತು. ಕೊನೆಗೆ ಎಲ್ಲರೂ ನೃತ್ಯ ಮಾಡಿ ಬಾರೋ ಮಳೆರಾಯ ಎಂದು ಕರೆದರು.

VijayaKarnataka
Pg.05

# ಅಳಿವಿನಂಚಿನ ಜೀವಿಯ ಉಳಿವಿನ ಧ್ಯಾನ

**ಜೀವಯಾನ**
ಪ್ರಸನ್ನ ಆಡುವಳ್ಳಿ



ಒಂದನ್ನೊಂದು ತಿಂದು ಬದುಕಬೇಕೆಂಬುದು ಪ್ರಕೃತಿಯ ನಿಯಮವಷ್ಟೇ? ಕಪ್ಪೆ ಹುಳುವನ್ನು ಹೆಕ್ಕುತ್ತದೆ. ಹಾವು ಕಪ್ಪೆಯನ್ನು ನುಂಗುತ್ತದೆ. ಹಾವನ್ನೇ ಹುಡುಕಿ ತಿನ್ನುವ ಹಕ್ಕಿಗಳಿವೆ. ಹುಲ್ಲು ತಿನ್ನುವ ಜಿಗರೆಯನ್ನು ಹುಲಿ ಹುಡುಕಿ ತಿನ್ನುತ್ತದೆ. ಸಸ್ಯಾಹಾರಿಯೆಂದು ಬೀಗುವವರೂ ಗಿಡಗಳು ತಮ್ಮ ಸಂತಾನೋತ್ಪತ್ತಿಗಾಗಿ ತಯಾರಿಸಿಕೊಂಡ ಬೀಜಗಳನ್ನು ಬೇಯಿಸಿ ಅನ್ನ ತಿನ್ನುತ್ತಾರೆ. ಇದರಲ್ಲಿ ಸರಿ ತಪ್ಪುಗಳನ್ನು ಹುಡುಕುತ್ತ ನಾವು ಕಾಲಹರಣ ಮಾಡುತ್ತೇವೆ. ವಿಜ್ಞಾನಿಗಳು ಆಹಾರ ಸರಪಳಿ ಎಂದರೆ ಒಂದನ್ನೊಂದು ದಾಟುತ್ತ ಜೀವಚೈತನ್ಯ ಹೀಗೆ ಸಾಗುತ್ತದೆಯೆಂದು ತತ್ವಶಾಸ್ತ್ರಗಳು ಹೇಳುತ್ತವೆ. ನಿಸರ್ಗದ ಕಣ್ಣಲ್ಲಂತೂ ಆನೆಗಿದ್ದಷ್ಟೇ ಸ್ಥಾನ ಅಡಕೆಗೂ ಇದೆ.

ಕೆಲ ವರ್ಷಗಳ ಹಿಂದೆ ಮಧ್ಯಪ್ರದೇಶದ ಸಾತ್ಪುರ ಬೆಟ್ಟಗಳ ಮಡಿಲಲ್ಲಿ ಕಾಡುಗೂಬೆಗಳೆಂಬ ಅಪರೂಪದ ಹಕ್ಕಿಗಳ ಬಗ್ಗೆ ಅಧ್ಯಯನ ಮಾಡುತ್ತಿದ್ದೆ. ಈ ಕಾಡುಗೂಬೆಗಳು ನಮ್ಮ ಹಾಲಕ್ಕಿಗಳ ಹಾಗೆಯೇ ಮೇಲ್ನೋಟಕ್ಕೆ ಕಾಣುತ್ತವಾದರೂ ತುಸು ಭಿನ್ನ ಪ್ರಬೇಧಕ್ಕೆ ಸೇರಿದವು. ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಗುಜರಾತಿನ ಕೆಲವೆಡೆಗಳಲ್ಲಿ ಮಾತ್ರ ಇವುಗಳ ಆವಾಸ. ಇವುಗಳ ಒಟ್ಟು ಸಂಖ್ಯೆ ಐನೂರನ್ನು ಮೀರಲಿಕ್ಕಿಲ್ಲವಾದ್ದರಿಂದ ಜಗತ್ತಿನ ಅಳಿವಿನಂಚಿನ ಜೀವಿಗಳ ಪಟ್ಟಿಯಲ್ಲಿಡಲಾಗಿದೆ. ಹಗಲು ಹೊತ್ತಿನಲ್ಲೇ ಹಾರಾಡುವುದು ಈ ಗೂಬೆಗಳ ವಿಶೇಷ. ಈ ಹಕ್ಕಿಗಳ ಓಡಾಟ, ವರ್ತನೆಗಳನ್ನು ದಾಖಲಿಸಿಕೊಂಡು ಸಂರಕ್ಷಣೆಗೆ ಸಹಕರಿಸುವ ಕೆಲಸ ಮಾಡುತ್ತಿದ್ದೆ. ಅದು ಗೂಬೆಗಳು ಮರಿ ಮಾಡುವ ಕಾಲ. ತೇಗದ ಮರದ ಪೊಟರೆಯೊಳಕ್ಕೆ ಮೊಟ್ಟೆಯಿಟ್ಟು, ಗಂಡು ಹೆಣ್ಣು ಎರಡೂ ಸೇರಿ ಮರಿಗಳನ್ನು ನೋಡಿಕೊಳ್ಳುತ್ತವೆ. ಕೆಲವೇ ನೂರುಗಳ ಸಂಖ್ಯೆಯಲ್ಲಿರುವ ಈ ಹಕ್ಕಿಗಳ ಒಂದೊಂದು ಮರಿಯೂ ಅಳಿವಿನಂಚಿನ ಜೀವಿಯ ಉಳಿವಿನ ಆಶಾಕಿರಣ.

ನಾನಿದ್ದ ಭಾಗದಲ್ಲಿ 50ಕ್ಕೂ ಅಧಿಕ ಕಾಡುಗೂಬೆಗಳಿದ್ದವಾದರೂ ಆ ವರ್ಷ ಕೇವಲ 3 ಗೂಬೆ ಜೋಡಿಗಳು ಮೊಟ್ಟೆಯಿಟ್ಟು ಮರಿ ಮಾಡಿದ್ದವು. ಒಂದು ಹಕ್ಕಿ ಗೂಡಿನಲ್ಲಿ ಕಾವು ಕೊಡುತ್ತ ಕುಳಿತಿರುವಾಗ ಸಂಗಾತಿ ಹೋಗಿ ಹುಳ ಹೆಕ್ಕಿಕೊಂಡು ಬರುತ್ತಿತ್ತು. ಹೀಗೆ ದಿನವಿಡೀ ಮರಿಗಳನ್ನು ಜತನ ಮಾಡುತ್ತಿದ್ದವು. ದುರದೃಷ್ಟವಶಾತ್ ಕೆಲ ದಿನಗಳಿಂದ ಅದರಲ್ಲಿ ಒಂದು ಗಂಡು ಹಕ್ಕಿ ನಾಪತ್ತೆಯಾಗಿತ್ತು. ಹೀಗಾಗಿ ಹೆಣ್ಣು ಹಕ್ಕಿಯೊಂದೇ ಎಲ್ಲವನ್ನೂ ನಿಭಾಯಿಸುತ್ತಿತ್ತು. ಒಂದು ದಿನ ಹಕ್ಕಿಗಳ ಚಲನವಲನ ದಾಖಲಿಸಲೆಂದು ಬೆಳ್ಳಂಬೆಳಗ್ಗೆ ನನ್ನ ಸ್ಥಳೀಯ ಸಹಾಯಕ ಬಾಬೂಲಾಲನೊಂದಿಗೆ ಗೂಡಿನ ಬಳಿಗೆ ಬಂದು ಕುಳಿತೆ. ಅಮ್ಮ ಗೂಬೆಗೆ ಹಸಿವಾಗಿದ್ದಿರಬೇಕು, ಮರಿಗಳನ್ನು ಅಲ್ಲೇ ಬಿಟ್ಟು ಗೂಡಿನಿಂದ ಹೊರಗೆ ಹಾರಿತು. ನಾನು ಬಾಬೂಲಾಲನನ್ನು ಗೂಡಿನ ಬಳಿಯೇ ನೋಡಲು ಬಿಟ್ಟು ಕ್ಯಾಮೆರಾ ಹಿಡಿದು ಹಿರಿಗೂಬೆಯ ಹಿಂದೆ ಬಿದ್ದೆ. ಗೂಬೆ ಮರದಿಂದ ಮರಕ್ಕೆ ಹಾರಿತ್ತ ಸುಮಾರು ಅರ್ಧ ಕಿ.ಮೀ. ದೂರದಲ್ಲಿದ್ದ ಗದ್ದೆಯಂಚಿನ ಮರದ ಮೇಲೆ ಕುಳಿತು, ನೆಲದ ಮೇಲೆ ಇಲಿ-ಹುಳಗಳನ್ನು ಹುಡುಕುತ್ತ ಕುಳಿತಿತ್ತು. ನಾನು ಕ್ಯಾಮೆರಾ ಹಿಡಿದು ಅದನ್ನೇ ಹಿಂಬಾಲಿಸುತ್ತ ಸಾಗಿದೆ.

ಎದುರಿಗೇ ಎರಡು ಕಣ್ಣುಗಳಿರುವ ಈ ಗೂಬೆಗಳ ವಿಶ್ವಾಸ ಗಳಿಸಿಕೊಳ್ಳುವುದು ಸುಲಭವಲ್ಲ, ನಾವೇನಾದರೂ ಬೈನಾಕ್ಯುಲರ್ ಅಥವಾ ಕ್ಯಾಮೆರಾ ಮೂಲಕ ಅವುಗಳನ್ನೇ ನೋಡುತ್ತ ಕುಳಿತದ್ದು ಅವಕ್ಕೆ ಗೊತ್ತಾದರೆ ಏನೋ ಅಪಾಯ ಮಾಡಬಹುದೆಂದು ಭಾವಿಸಿ ತಮ್ಮ ಸಹಜ ವರ್ತನೆಯನ್ನು ಬಿಟ್ಟು ಬೇರೆಡೆಗೆ ಹಾರಿಬಿಡುತ್ತವೆ. ಪುಟ್ಟದೊಂದು ಅಡಗುದಾಣ ಮಾಡಿಕೊಂಡು ಅದರೊಳಗೆ ಸದ್ದಿಲ್ಲದೇ ಕುಳಿತು ಗಮನಿಸಬೇಕು. ಆದರೆ, ಈ ಗೂಬೆಗಳನ್ನು ಕಳೆದೊಂದು ವರ್ಷದಿಂದ ನೋಡುತ್ತಿದ್ದರಿಂದ ಅವಕ್ಕೂ ನಮ್ಮ ಇರುವಿಕೆ ಅಭ್ಯಾಸವಾಗಿ ಹೋಗಿತ್ತು. ಇದ್ಯಾವುದೋ ಕ್ಯಾಮೆರಾ ಹೊತ್ತ ವಿಚಿತ್ರ ನಿರುಪದ್ರವಿ ಪ್ರಾಣಿ ಎಂದು ನಮ್ಮ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೇ ತಮ್ಮ ಪಾಡಿಗೆ ತಾವು ಇರುತ್ತಿದ್ದವು. ಹೀಗಾಗಿ ಹತ್ತಿರದಿಂದ ಗಮನಿಸುತ್ತ ನಮಗೂ ಅವುಗಳ ಬದುಕನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿತ್ತು.



ಅಮ್ಮ ಗೂಬೆ ಮರದ ಮೇಲೆ ತಲೆ ತಿರುಗಿಸುತ್ತ ನೆಲ ದಿಟ್ಟಿಸುತ್ತ ಕುಳಿತ ಸ್ವಲ್ಪ ಹೊತ್ತಿನಲ್ಲೇ ದೂರದಲ್ಲಿ ಬಾಬೂಲಾಲನ ಕೂಗು ಕೇಳಿತು. 'ಜಲ್ದಿ ಆಜಾವೋ' ಎಂದೇನೋ ಹೇಳಿದ್ದು ಕೇಳಿದಂತಾಗಿ, ಎಂದಿನಂತೆ ಏನೋ ಎಡವಟ್ಟು ಮಾಡಿಕೊಂಡಿರಬೇಕೆಂದು ಭಾವಿಸಿ ಎಲ್ಲ ಬಿಟ್ಟು ಅವನಿರುವಲ್ಲಿಗೆ ಓಡಿದೆ. ಬಾಬೂಲಾಲ ಗೂಬೆಗೂಡಿನ ಮರದ ಪೊಟರೆಯತ್ತ ಬೆರಳು ತೋರಿದ. ಅಲ್ಲೊಂದು ಹೆಬ್ಬಾವು! ಮರವನ್ನು ಸುತ್ತಿದ್ದ ಹೆಬ್ಬಾವು ಪೊಟರೆಯೊಳಕ್ಕೆ ಬಾಯಿಡಲು ಹವಣಿಸುತ್ತಿದೆ. ಒಳಗೆ 3 ಅಳಿವಿನಂಚಿನ ಹಕ್ಕಿ ಮರಿಗಳು. ಬಾಬೂಲಾಲ "ಸಾರ್ ಕಲ್ಲು ಹೊಡೆದು ಓಡಿಸಲಾ," ಎನ್ನುತ್ತ ಸುತ್ತಮುತ್ತ ಸೂಕ್ತ ಗಾತ್ರದ ಕಲ್ಲಿಗೆ ಹುಡುಕಾಡತೊಡಗಿದ. ನನಗೆ ಧರ್ಮಸಂಕಟ. ಒಂದೆಡೆ ಅಳಿವಿನಂಚಿನ ಜೀವಿಯ ಭವಿಷ್ಯದ ಆಶಾಕಿರಣವಾದ 3 ಮರಿಹಕ್ಕಿಗಳು. ಮತ್ತೊಂದೆಡೆ, ಪ್ರಕೃತಿ ಸಹಜವಾಗಿ ಹಸಿದ ಹಾವು. ಏನೂ ಮಾಡದೇ ಹಾವು ಆ ಹಕ್ಕಿ ಮರಿಗಳನ್ನು ನುಂಗಲು ಬಿಡಲೇ ಅಥವಾ ಮಧ್ಯಪ್ರವೇಶಿಸಿ ಅದರ ಊಟವನ್ನು ಕಸಿದುಕೊಳ್ಳಲೇ? ವಿಚಿತ್ರ ಸಂದಿಗ್ಧ ಪರಿಸ್ಥಿತಿ. ಅದು ಅಳಿವಿನಂಚಿನ ಹಕ್ಕಿಯೆಂದು ಹೆಬ್ಬಾವಿಗೇನು ಗೊತ್ತು ಪಾಪ. ಹಸಿದ ಹೊಟ್ಟೆಯನ್ನು ತಣಿಸಿಕೊಳ್ಳಲು ಅದೂ ಸಾಕಷ್ಟು ಕಷ್ಟಪಟ್ಟು ಅಲ್ಲಿಯವರೆಗೆ ಹೋಗಿದೆ. ನಾನೀಗ ಮಧ್ಯ ಪ್ರವೇಶಿಸುವುದು ಪ್ರಕೃತಿ ನಿಯಮಕ್ಕೆ ವಿರುದ್ಧವೇ? ದ್ವಂದ್ವದಲ್ಲೇ ಬಾಬೂಲಾಲನನ್ನು ತಡೆದೆ. ವಿಧಿಯು ಅದೇನು ಆಟವನ್ನು ಅಡಗಿಸಿಟ್ಟಿದೆಯೋ ನೋಡೋಣ ಎಂದು ಸುಮ್ಮನೆ ಕುಳಿತೆವು. ಅಷ್ಟು ದಪ್ಪದ ಹೆಬ್ಬಾವು ಪುಟ್ಟ ಪೊಟರೆಯೊಳಕ್ಕೆ ಬಾಯಿಟ್ಟು ಹಕ್ಕಿಮರಿಗಳನ್ನು ಹೊರತೆಗೆಯಲು ಆಗುವುದಿಲ್ಲವೇನೋ ಎಂಬ ಸಣ್ಣ ಆಶಾಕಿರಣವಿತ್ತು. ತುಸು ಸಮಯ ಅತ್ತಿತ್ತ ಸುಳಿದು ಹೆಬ್ಬಾವು ತನ್ನ ದೇಹವನ್ನು ಕುಗ್ಗಿಸಿಕೊಂಡು ಪೊಟರೆಯೊಳಕ್ಕೆ ಬಾಯಿಟ್ಟಿತು. ಒಂದರ ಹಿಂದೆ ಒಂದರಂತೆ ಮೂರೂ ಮರಿಹಕ್ಕಿಗಳು ಹೆಬ್ಬಾವಿನ ಹೊಟ್ಟೆ ಸೇರಿದವು. ಗೂಡು ಖಾಲಿ ಮಾಡಿದ ಹಾವು ಸರಸರನೆ ಮರವಿಳಿದು ಬೇರೆಡೆಗೆ ಹೊಯಿತು.

ಮಾತಿಲ್ಲದೇ ನನ್ನ ಜತೆ ಇದನ್ನೆಲ್ಲ ನೋಡುತ್ತ ಕುಳಿತಿದ್ದ ಬಾಬೂಲಾಲನತ್ತ ತಿರುಗಿದೆ. ಅವನ ಕಣ್ಣಂಚಲ್ಲಿ ನೀರು. ಇಷ್ಟು ದಿನ ಹಿಂದೆ ಬಿದ್ದು ದಿನವೂ ನೋಡುತ್ತಿದ್ದ ಗೂಬೆಯ ಮರಿಗಳು ಇನ್ನಿಲ್ಲ. "ನೀವು ಬೇಡ ಎನ್ನದಿದ್ದರೆ ಹಾವನ್ನು ಹೊಡೆದು ಕೊಂದೇ ಬಿಡುತ್ತಿದ್ದೆ," ಎಂದು ಕೋಪದಿಂದ ನನ್ನತ್ತ ನೋಡಿದ. ಪ್ರಕೃತಿಯಲ್ಲಿ ಹಕ್ಕಿಗಿದ್ದಷ್ಟೇ ಬದುಕುವ ಹಕ್ಕು ಅದನ್ನು ತಿನ್ನುವ ಹಾವಿಗೂ ಇದೆ ಎಂದು ಇವನಿಗೆ ಹೇಗೆ ಅರ್ಥ ಮಾಡಿಸಲಿ?


ಸ್ವಲ್ಪ ಹೊತ್ತಿನ ಬಳಿಕ ಅಮ್ಮ ಗೂಬೆ ತನ್ನ ಗೂಡಿನ ಬಳಿ ಬಂತು. ಈ ಬಾರಿ ಅದರ ಕೊಕ್ಕಿನ ಅಂಚಿನಲ್ಲಿ ಪುಟ್ಟದೊಂದು ಇಲಿಮರಿ ನೇತಾಡುತ್ತಿತ್ತು. ಅಮ್ಮ ಹಕ್ಕಿ ತನ್ನ ಮರಿಗಳಿಗೆ ಆಹಾರವಾಗಿ ಇಲಿಯೊಂದನ್ನು ಕೊಂದು ತಂದಿತ್ತು. ತನ್ನ ಗೂಡಿನೊಳಕ್ಕೆ ಇಣುಕಿ ನೋಡಿತು, ಅತ್ತಿತ್ತ ಹುಡುಕಿತು. ಮರಿಗಳು ಕಾಣದೇ ಕಕ್ಕಾಬಿಕ್ಕಿಯಾಗಿ ಕೊಕ್ಕಿನಲ್ಲಿದ್ದ ಇಲಿಯನ್ನು ಕಾಲಿಗೆ ದಾಟಿಸಿ ಮರಿಗಳನ್ನು ಮೆಲುದನಿಯಲ್ಲಿ ಕರೆಯತೊಡಗಿತು. ಬರಬರುತ್ತ ಅಮ್ಮ ಹಕ್ಕಿಯ ದನಿ ಜೋರಾಗತೊಡಗಿತು. ಮಕ್ಕಳ ಸುಳಿವಿಲ್ಲ! ಮರದ ಕೆಳಗೆ ಬೈನಾಕ್ಯುಲರ್ ಹಿಡಿದು ನಿಂತ ನಾವಿಬ್ಬರು ಮನುಷ್ಯರು. ನಮ್ಮನ್ನೇ ಕಣ್ಣಲ್ಲಿ ಕಣ್ಣಿಟ್ಟು ದಿಟ್ಟಿಸುತ್ತ ಹೃದಯ ವಿದ್ರಾವಕವಾಗಿ ರೋದಿಸತೊಡಗಿತು. ನಾವೇ ಅದರ ಮರಿಗಳಿಗೆ ಏನಾದರೂ ಮಾಡಿದೆವೆಂದು ಅಮ್ಮ ಗೂಬೆ ಭಾವಿಸಿತೇ? ಇವರನ್ನು ನಿರುಪದ್ರವಿಗಳೆಂದು ನಂಬಿದ್ದೇ ತಪ್ಪಾಯಿತೆಂದು ಅದಕ್ಕೆ ಅನಿಸಿರಬಹುದೇ? ಹಾವು ಕಂಡರೂ ಏನೂ ಮಾಡದ ನಾನೇ ನಿಜಕ್ಕೂ ಅಪರಾಧಿಯೇ? ಒಂದೇ ಸಮನೆ ಕೂಗುತ್ತ, ಮರಿಗಳನ್ನು ಹುಡುಕುತ್ತಿದ್ದ ಗೂಬೆಯ ವೇದನೆ ಕೇಳಲಾಗದೇ, ಅದರ ಕಣ್ಣಲ್ಲಿ ಕಣ್ಣಿಟ್ಟು ನೋಡಲಾಗದೇ ನಾವು ಅಲ್ಲಿಂದ ಹೊರಟೆವು.

(ಲೇಖಕರು: ಪರಿಸರ ವಿಜ್ಞಾನಿ)

VijayaKarnataka
Pg.09

# ಅಡಕೆ ಬೆಳೆಗಾರರಿಗೆ ಕೇಂದ್ರ ಶಾಕ್

## ಭೂತಾನ್‌ನಿಂದ ಷರತ್ತುರಹಿತ ಆಮದಿಗೆ ಗ್ರೀನ್ ಸಿಗ್ನಲ್




**ಹೊಸದಿಲ್ಲಿ:** ಈಗಾಗಲೇ ಉನ್ನತ ದರ್ಜೆಯ ದೇಶಿ ಅಡಕೆಯ ಜತೆಗೆ ಕಳಪೆ ಅಡಕೆ ಸೇರಿಸಿ ಮಾರಾಟ ಮಾಡುವ ದಂಧೆಗೆ ಹೈರಾಣಾಗಿರುವ ಬೆಳೆಗಾರರಿಗೆ ಕೇಂದ್ರ ಸರಕಾರ ಹೊಸ ಶಾಕ್ ನೀಡಿದೆ. ಕನಿಷ್ಠ ಆಮದು ದರದ ಷರತ್ತಿಲ್ಲದೆ ಭೂತಾನ್‌ನಿಂದ ತಾಜಾ (ಹಸಿರು) ಅಡಕೆಯನ್ನು ಆಮದು ಮಾಡಿಕೊಳ್ಳಲು ಅನುಮತಿ ನೀಡಿದೆ. ಇದರಿಂದ ಅಡಕೆ ಬೆಲೆ ದೊಡ್ಡ ಮಟ್ಟಕ್ಕೆ ಕುಸಿಯುವ ಸಾಧ್ಯತೆ ಇದೆ. ಒಡಿಶಾದ ಹತಿಸರ್ ಹಾಗೂ ಅಸ್ಸಾಂನ ದರ್‍ರಂಗದ ಮೂಲಕ ಆಮದು ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ ಎಂದು ವಿದೇಶಿ ವ್ಯಾಪಾರದ ಮಹಾನಿರ್ದೇಶನಾಲಯ (ಡಿಜಿಎಫ್‌ಟಿ) ಅಧಿಸೂಚನೆ ಹೊರಡಿಸಿದೆ.

ಈ ಹಿಂದೆ 2022ರ ಸೆಪ್ಟೆಂಬರ್‌ನಲ್ಲಿ ಕನಿಷ್ಠ ಆಮದು ಬೆಲೆ (ಎಂಐಪಿ) ಷರತ್ತಿಲ್ಲದೆ ಭೂತಾನ್‌ನಿಂದ 17,000 ಟನ್ ಹಸಿರು ಅಡಕೆಯನ್ನು ಆಮದು ಮಾಡಿಕೊಳ್ಳಲು ಅನುಮತಿ ನೀಡಿತ್ತು. ಇದಕ್ಕೂ ಮೊದಲು 2017ರಲ್ಲಿ ಕೇಂದ್ರ ಸರಕಾರ ದೇಶೀಯ ಅಡಕೆ ಬೆಳೆಗಾರರನ್ನು ರಕ್ಷಿಸಲು ಪ್ರತಿ ಕೆಜಿಗೆ 251 ರೂ.ಗಳ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಿತ್ತು. 2018ರಲ್ಲಿಬಂದು ಕೆಜಿಗೆ 251 ರೂ.ಗಿಂತ ಹೆಚ್ಚಿದ್ದರೆ ಯಾವುದೇ ರೂಪದಲ್ಲಿ ಅಡಿಕೆ ಆಮದು ಮಾಡಿಕೊಳ್ಳಬಹುದು ಎಂದು ಅನುಮತಿ ನೀಡಲಾಗಿತ್ತು.

ಅಡಕೆ ಮಾರಾಟದಲ್ಲಿನ ಅಕ್ರಮ ವಹಿವಾಟು ಮಲೆನಾಡಿನ ಹೆಮ್ಮೆಯ ವಿಶಿಷ್ಟ ಸಾಂಪ್ರಾದಾಯಿಕ ತಳಿ ಅಡಕೆ ಬೆಲೆಗೆ ಕಂಟಕವಾಗಿದೆ. ಈಗಾಲೇ ಉತ್ತಮ ಮತ್ತು ಕಳಪೆ ದರ್ಜೆ ಅಡಿಕೆಯನ್ನು ಬೆರಕೆ ಮಾಡಿ ಮಾರಾಟ ಮಾಡುವ ದಂಧೆ ಹೆಚ್ಚಿದೆ. ಭೂತಾನ್, ಶ್ರೀಲಂಕಾ, ಮ್ಯಾನ್ಮಾರ್ ದೇಶಗಳು ಸೇರಿದಂತೆ

ಮೇಘಾಲಯ, ಅಸ್ಸಾಂ ರಾಜ್ಯದ ಅಡಕೆಯನ್ನು ಆಮದು ಮಾಡಿಕೊಂಡು ಇಲ್ಲಿನ ಅಡಕೆ ಜತೆಗೆ ಸೇರಿಸಿ ಸಾಂಪ್ರದಾಯಿಕ ಅಡಕೆ ಹೆಸರಲ್ಲಿ ವಹಿವಾಟು ನಡೆಸಲಾಗುತ್ತಿದೆ. ಈ ದಂಧೆ ಹಿಂದೆ ಇರುವ ಪ್ರಭಾವಿಗಳು ಮಾರುಕಟ್ಟೆ ವ್ಯವಸ್ಥೆ ಹಾಳುಮಾಡುತ್ತಿದ್ದಾರೆ. ಇದರ ಜತೆ ಆಮದಿನಿಂದ ಅಡಕೆ ಬೆಲೆ ಕುಸಿಯಲಿದೆ ಎಂದು ಬೆಳೆಗಾರರು ಆತಂಕ ವ್ಯಕ್ತಪಡಿಸಿದ್ದಾರೆ.

VijayaKarnataka Pg.06

# ಹೆಣ್ಣು ಕರು 80% ಗ್ಯಾರಂಟಿ ಯಶಸ್ವಿ

## ಕೇಂದ್ರದ ಹೆಣ್ಣು ಕರು ಖಾತ್ರಿ ಯೋಜನೆ। ಈ ಬಾರಿ ಹೆಚ್ಚು ಸಕ್ಸಸ್ ರೇಟ್ ನಿರೀಕ್ಷೆ

■ ಬಸವರಾಜ ಕೆ.ಜಿ. ದಾವಣಗೆರೆ
basava.darshu@gmail.com

ಹೈನುಗಾರರ ಮೇಲಿದ್ದ ಗಂಡು ಕರು (ಹೋರಿ) ಸಾಕುವ ಭಾರ ಇಳಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಪರಿಚಯಿಸಿರುವ 'ಹೆಣ್ಣು ಕರು ಗ್ಯಾರಂಟಿ' ನೀಡುವ ಲಿಂಗ ನಿರ್ಧಾರಿತ ವೀರ್ಯ ಬಳಕೆ ಯೋಜನೆ ರಾಜ್ಯದಲ್ಲಿ ಶೇ.80ರಷ್ಟು ಯಶಸ್ವಿಯಾಗಿದೆ.

ರಾಜ್ಯಾದ್ಯಂತ 2023ರ ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಒಟ್ಟು 17,850 ರಾಸುಗಳಿಗೆ ಲಿಂಗ ನಿರ್ಧರಿತ ವೀರ್ಯ ನಳಿಕೆ ಮೂಲಕ ಕೃತಕ ಗರ್ಭಧಾರಣೆ ಮಾಡಲಾಗಿತ್ತು. ಆ ಪೈಕಿ 5640 ಹಸುಗಳು ಪರಿಪಕ್ವವಾಗಿ ಗರ್ಭ ಧರಿಸಿದ್ದವು. ಗರ್ಭ ಧರಿಸಿದ ಹಸುಗಳಲ್ಲಿ ಈಗ 4479 ಹಸುಗಳು ಹೆಣ್ಣು ಕರುವಿಗೆ ಜನ್ಮ ನೀಡಿವೆ. 349 ಹಸುಗಳು ಗಂಡು ಕರು ಹಾಕಿವೆ.

**ಹೆಣ್ಣು ಕರು ಖಾತ್ರಿ:** ಸಾಂಪ್ರದಾಯಿಕ ವೀರ್ಯ ನಳಿಕೆ ಬಳಸಿ ಕೃತಕ ಗರ್ಭಧಾರಣೆ ಮಾಡುವುದರಿಂದ ಹೆಣ್ಣು ಕರು ಹುಟ್ಟುವ ಸಾಧ್ಯತೆ ಶೇ.50ರಷ್ಟಿತ್ತು. ಆದರೆ, ಗಂಡು ಕರು ಜನಿಸಿದರೆ ಅದನ್ನು ಸಾಕುವುದು ಹೈನುಗಾರರಿಗೆ ಹೊರೆಯಾಗುತ್ತದೆ. ಕಾರಣ ಅವರ ಮೇಲಿನ ಹೊರೆ ತಗ್ಗಿಸಲು ಕೇಂದ್ರ ಸರಕಾರ ವೇಗವರ್ಧಿತ ತಳಿ ಸುಧಾರಣೆ ಕಾರ್ಯಕ್ರಮದಡಿ ದೇಶದ ಎಲ್ಲ ರಾಜ್ಯಗಳಲ್ಲಿ 'ಹೆಣ್ಣು ಕರು ಖಾತ್ರಿ' ನೀಡುವ ಯೋಜನೆ ಆರಂಭಿಸಿತ್ತು. ಸಾಂಪ್ರದಾಯಿಕ ಪದ್ಧತಿಗೆ ಹೋಲಿಸಿದರೆ ಈಗ ಬಂದಿರುವ ಫಲಿತಾಂಶ ಆಶಾದಾಯಕವಾಗಿದೆ.

ಲಿಂಗ ನಿರ್ಧಾರಿತ ವೀರ್ಯ ಬಳಕೆಯಿಂದ ಶೇ.90ರಷ್ಟು ಹೆಣ್ಣು ಕರುವೇ ಹುಟ್ಟುತ್ತದೆ ಎಂದು ತಜ್ಞರು ಭರವಸೆ ನೀಡಿದ್ದರು. ಭರವಸೆ ನೀಡಿದಷ್ಟು ಪ್ರಮಾಣ ತಲುಪದಿದ್ದರೂ ಪ್ರಥಮ ಯತ್ನದಲ್ಲೇ ನಿರೀಕ್ಷೆಯ ಸಮೀಪ ಬಂದಿರುವುದು ಪಶು ಸಂಗೋಪನೆ ಇಲಾಖೆ ಅಧಿಕಾರಿಗಳ ಉತ್ಸಾಹ ಹೆಚ್ಚಿಸಿದೆ. ರಾಜ್ಯದ ಕೆಲ ಜಿಲ್ಲೆಗಳಲ್ಲಿ ಈ ಪ್ರಮಾಣ ಶೇ.90 ತಲುಪಿದ್ದು, ಈ ಫಲಿತಾಂಶದಿಂದ ಉತ್ತೇಜನ ಪಡೆದ ರಾಜ್ಯ ಸರಕಾರ ಈ ಬಾರಿ ಹೆಚ್ಚಿನ ಸಂಖ್ಯೆ ಹಸುಗಳಿಗೆ ಲಿಂಗ ನಿರ್ಧಾರಿತ ವೀರ್ಯ ನೀಡಲು ನಿರ್ಧರಿಸಿದೆ. ಬರುವ ತಿಂಗಳು ಅಭಿಯಾನ ಆರಂಭವಾಗಲಿದೆ.

**ವೀರ್ಯ ಡೋಸ್‌ಗಳ ವಿವರ**

| ಒಟ್ಟು | ಎಚ್‌ಎಫ್ | ಜೆರ್ಸಿ | ಗರ್ಭಧಾರಣೆ | ಪಾಸಿಟಿವ್ | ಹೆಣ್ಣುಕರು |
|---|---|---|---|---|---|
| 2000 | 13000 | 7000 | 17850 | 5640 | 4479 |



ಲಿಂಗ ನಿರ್ಧಾರಿತ ವೀರ್ಯ ಬಳಕೆ ಯೋಜನೆ ಮೂಲಕ ಜನಿಸಿದ ಹೆಣ್ಣು ಕರು ಜತೆ ಮಾಲೀಕರು.

- ಗರ್ಭ ಧರಿಸಿದ್ದ 5640 ಹಸುಗಳ ಪೈಕಿ 4479 ಹೆಣ್ಣು ಕರು ಜನನ।
- ಮುಂದಿನ ತಿಂಗಳು ವಿಶೇಷ ಅಭಿಯಾನ ಆರಂಭ

**ಜಿಲ್ಲಾವಾರು ವಿವರ**

| ಜಿಲ್ಲೆ | ಡೋಸ್ | ಪಾಸಿಟಿವ್ ಹೆಣ್ಣುಕರು |
|---|---|---|
| ಮಂಡ್ಯ | 1600 | 482406 |
| ಶಿವಮೊಗ್ಗ | 1500 | 447377 |
| ಬೆಳಗಾವಿ | 1400 | 292255 |
| ದ.ಕನ್ನಡ | 1400 | 504473 |
| ದಾವಣಗೆರೆ | 1200 | 253198 |

### ನೆಗೆಟಿವ್ ಏಕೆ ಹೆಚ್ಚು?



"ಲಿಂಗ ನಿರ್ಧಾರಿತ ವೀರ್ಯ ಬಳಕೆ ವೇಳೆ ಒಂದು ಹಸುವಿಗೆ ಎರಡು ಡೋಸ್ ನೀಡಲಾಗುತ್ತದೆ. ಕೆಲವು ಹಸುಗಳು ಮೊದಲ ಡೋಸ್‌ಗೆ ಗರ್ಭ ಧರಿಸುತ್ತವೆ. ಬಹುತೇಕ ಹಸುಗಳು ಎರಡು ಡೋಸ್ ನೀಡಿದರೂ ಗರ್ಭ ಧರಿಸುವುದಿಲ್ಲ, ಇನ್ನೊಂದೆಡೆ ಮೊದಲ ಡೋಸ್ ಹೆಣ್ಣು ಕರುವಿನ ಸೆರಮ್ ನೀಡಿದ ಹಸು, ಎರಡನೇ ಬಾರಿ ಬಂದಾಗ ಪಶು ಕೇಂದ್ರದಲ್ಲಿ ಡೋಸ್ ಲಭ್ಯವಿಲ್ಲದಿದ್ದರೆ ಅದನ್ನು ನೆಗೆಟಿವ್ ಎಂದು ಪರಿಗಣಿಸಲಾಗುತ್ತದೆ. ಜತೆಗೆ ಗರ್ಭ ಧರಿಸಿದ ಹಸುಗಳನ್ನು ಕೆಲ ರೈತರು ಮಾರಾಟ ಮಾಡಿರುತ್ತಾರೆ. ಕೆಲವು ಹಸುಗಳು ಮರಣ ಹೊಂದಿರುತ್ತವೆ. ಅಷ್ಟೇ ಅಲ್ಲದೆ ಒಂದಷ್ಟು ಹೈನುಗಾರರು ಕರು ಜನಿಸಿದ ಬಗ್ಗೆ ಇಲಾಖೆಗೆ ಮಾಹಿತಿ ನೀಡದಿರುವ ಸಾಧ್ಯತೆಗಳೂ ಇರುತ್ತವೆ.

**ಬಂಜೆತನ ಪ್ರಮಾಣ ಕಡಿಮೆ:** ಇತ್ತೀಚೆಗೆ ಹಸುಗಳಲ್ಲಿ ಗರ್ಭ ಧರಿಸುವ ಸಾಮರ್ಥ್ಯ ಕಡಿಮೆಯಾಗುತ್ತಿರುವ ಪರಿಣಾಮ ಯೋಜನೆ ಮೇಲೂ ಉಂಟಾಗಿದೆ. ಇದರೊಂದಿಗೆ ಹಸು ಹೀಟ್‌ಗೆ ಬಂದಾಗ ರೈತರು ಪಶು ಆಸ್ಪತ್ರೆಗೆ ಮಾಹಿತಿ ನೀಡಿಲ್ಲ ಅಥವಾ ಹೀಟ್‌ಗೆ ಬಂದಿರುವುದು ರೈತರಿಗೂ ತಿಳಿದಿಲ್ಲ, ಹೀಗಾಗಿ ಗರ್ಭ ಧರಿಸಿದ ಹಸುಗಳ ಸಂಖ್ಯೆಗಿಂತ ಬಂಜೆ ಹಸುಗಳ ಪ್ರಮಾಣ ಹೆಚ್ಚಾಗಿದೆ.

DeccanHerald Pg.03B

# Spurt in mushroom output on budding demand

VARSHA GOWDA
BENGALURU, DHNS

The cultivation of oyster mushrooms has found new fervour in the state after increased demand. In fact, production of the fungus variety increased from approximately 260 tonnes in 2021 to 320 tonnes in 2023 — a rise of almost 23%. In all, the state produced about 410 tonnes of oyster, milky and button mushrooms last year.

The climatic conditions in Bengaluru and its environs are conducive for cultivating oyster mushrooms, explains Kavya, who grows white oyster mushrooms on 100 sqft of her balcony area in K R Puram. "I am able to produce 5 kg a day just from my balcony while my 3,000 sqm farm in Hoskote yields 20 kg a day," she says. Over the past five years, she has noticed a marked increase in interest in oyster mushroom cultivation due to rising demand in the city.



Udupi and Bengaluru were the highest producers of oyster mushrooms in the state with 80 tonnes and 47 tonnes, accounting for 40% of the total production in 2023-24.

Udupi and Bengaluru were the highest producers of oyster mushrooms in the state at 80 tonnes and 47 tonnes respectively — accounting for 40% of the total production in 2023-24.

Rising awareness on health, wellness and nutritional benefits of mushroom consumption is driving this wave, explains K B Dundi, additional director, department of horticulture.

"People are focused on eating healthy and are looking for nutrition in vegetables and mushrooms," he adds.

Mushrooms were hard to come by until about five years back. After restaurants started working with the ingredients, demand picked up, explains Sanjana, a resident of Bengaluru. "We can slowly see customers for other exotic types of mushrooms as well. The pandemic saw a lot of people turn to cooking as a hobby. Many want to work with speciality ingredients like shiitake mushrooms and oyster mushrooms. This may have contributed to the boom," she explains.

Despite demand and an increase in production, Karnataka still has unrealised potential in mushroom production. "Karnataka has very few button mushroom units as these have to be adopted on a very large scale. A few districts are cultivating oyster and milky mushrooms. The scale of the units and the capital involved is comparatively low," explains Varun Amingad, assistant director of horticulture, mushroom laboratory.

Temperate environments with temperatures in range of 20 to 26 degrees Celsius are ideal for oyster mushrooms cultivation, he adds. "Milky and button mushrooms require temperature-controlled environments," he adds. Additionally, 1 kg of oyster mushroom can be priced at around Rs 150 in wholesale markets, and the cost of cultivation is Rs 120 per kg.

Agricultural universities and private companies have also made spore bags or kits that make it easy for beginners. Easy access to courses by the Department of Horticulture and the Indian Institute of Horticultural Research has also encouraged people to try their hand at mushroom farming. In 2019, the Department of Horticulture trained 785 students while the numbers rose to 1,610 in 2024.

Roopa Patil, a senior scientist at the Krishi Vigyan Kendra, Sirsi, explains that though a lot of people show interest, many do not pursue mushroom farming. "The shelf life of oyster mushrooms is only two days and there are concerns of contamination as well. There is a market for mushrooms in some urban regions and only if this spreads to all districts in Karnataka can the mushroom boom really take off," she says.

**Kannadaprabha Pg.02**

# ನಾಳೆ ಜಿಕೆವಿಕೆಯಲ್ಲಿ ರೇಷ್ಮೆ ಕೃಷಿ ಪಾಲುದಾರ ಸಭೆ: ಗಿರಿರಾಜ್ ಉದ್ಘಾಟನೆ

**ಬೆಂಗಳೂರು:** ಕೇಂದ್ರ ರೇಷ್ಮೆ ಮಂಡಳಿ 75 ವರ್ಷ ಪೂರೈಸಿದ ಹಿನ್ನೆಲೆ ಸೆ. 21ರಂದು ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಡಾ. ಬಾಬು ರಾಜೇಂದ್ರ ಪ್ರಸಾದ್ ಸಭಾಂಗಣದಲ್ಲಿ ರೇಷ್ಮೆ ಕೃಷಿ-ಪಾಲುದಾರ ಸಭೆ ಹಮ್ಮಿಕೊಂಡಿದೆ ಎಂದು ಕೇಂದ್ರ ರೇಷ್ಮೆ ಮಂಡಳಿಯ ಸದಸ್ಯ ಕಾರ್ಯದರ್ಶಿ ಪಿ. ಶಿವಕುಮಾರ್ ತಿಳಿಸಿದರು. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಸೆ.21ರ ಮಧ್ಯಾಹ್ನ 2.30ಕ್ಕೆ ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್ ಉದ್ಘಾಟಿಸಲಿದ್ದಾರೆ. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಉದ್ಯೋಗಗಳ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ರೈಲ್ವೆ ಇಲಾಖೆ ರಾಜ್ಯ ಸಚಿವ ವಿ.ಸೋಮಣ್ಣ, ರಾಜ್ಯ ಪಶುಸಂಗೋಪನೆ ಇಲಾಖೆ ಸಚಿವ ಕೆ.ವೆಂಕಟೇಶ್, ಸಂಸದ ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ ಅವರು ಭಾಗವಹಿಸಲಿದ್ದಾರೆ ಎಂದರು. 1948ರಲ್ಲಿ ಪ್ರಾರಂಭವಾದ ಕೇಂದ್ರ ರೇಷ್ಮೆ ಮಂಡಳಿ ದೇಶಾದ್ಯಂತ 159 ಘಟಕಗಳಿದ್ದು, 9 ಸಂಶೋಧನಾ ಸಂಸ್ಥೆಗಳು ವಿವಿಧ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದರು.

**Vishwavani Pg.08**

## ಸಂಕಷ್ಟ ಕಾಲದಲ್ಲೇ ರೈತರಿಗೆ ಪೆಟ್ಟು

# ಭೂತಾನ್ ಅಡಿಕೆ ಆಮದು ಕೇಂದ್ರದ ಹಸಿರು ನಿಶಾನೆ

**ದೆಹಲಿ:** ಭೂತಾನ್‌ನಿಂದ 'ಕನಿಷ್ಠ ಆಮದು ದರ' ಎಂಬ ಷರತ್ತು ಇಲ್ಲದೇ ಹಸಿ ಅಡಿಕೆ ಆಮದು ಮಾಡಿಕೊಳ್ಳುವುದಕ್ಕೆ ಕೇಂದ್ರ ಸರಕಾರ ಒಪ್ಪಿಗೆ ಸೂಚಿಸಿದ್ದು, ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ಅಡಿಕೆ ಬೆಳೆಗಾರರಿಗೆ ಇದು ದೊಡ್ಡ ಪೆಟ್ಟು ನೀಡಲಿದೆ.



17 ಸಾವಿರ ಟನ್ ಅಡಿಕೆಯನ್ನು ಒಡಿಶಾದ ಹತಿಸರ್ ಮತ್ತು ಅಸ್ಸಾಂನ ದರ್ರಂಗ್ ಕಸ್ಟಮ್ಸ್ ಕೇಂದ್ರದ ಮೂಲಕ ಆಮದು ಮಾಡಿಕೊಳ್ಳಲು ಕೇಂದ್ರ ಸರಕಾರ ನಿರ್ಧರಿಸಿದೆ. ಸರಕಾರದ ಈ ನಡೆ ಅದಾಗಲೇ ಫಸಲು ಇಳುವರಿ ಕುಸಿತದಿಂದ ಸಂಕಷ್ಟದಲ್ಲಿರುವ ದೇಶದ ಅಡಿಕೆ ಬೆಳೆಗಾರರಿಗೆ ದೊಡ್ಡ ಪೆಟ್ಟು ನೀಡಲಿದೆ. 2022ರ ಸೆಪ್ಟೆಂಬರ್‌ನಲ್ಲಿ ಭಾರತ ಸರಕಾರ 'ಕನಿಷ್ಠ ಆಮದು ದರ'ದ ಷರತ್ತು ಇಲ್ಲದೇ ವಾರ್ಷಿಕ 17 ಸಾವಿರ ಟನ್ ಹಸಿ ಅಡಿಕೆ ಆಮದು ಮಾಡಿಕೊಳ್ಳಲು ಅನುಮತಿ ನೀಡಿತ್ತು. ಅದರಂತೆ ಈ ವರ್ಷವೂ ಅಡಿಕೆ ಆಮದಿಗೆ ಅನುಮತಿ ನೀಡಲಾಗಿದೆ ಎಂದು ಡಿಜಿಎಫ್‌ಟಿ ಮಾಹಿತಿ ನೀಡಿದೆ. ಈ ಮೊದಲು 2017ರಲ್ಲಿ ದೇಶದ ರೈತರ ಹಿತ ಕಾಪಾಡಲು ಪ್ರತಿಕೆಜಿ ಅಡಿಕೆಗೆ 251 ರು. ಕನಿಷ್ಠ ಆಮದು ದರ ನಿಗದಿಪಡಿಸಲಾಗಿತ್ತು. ಬಳಿಕ 2018ರಲ್ಲಿ 251 ರು.ಗೂ ಅಧಿಕ ಬೆಲೆಗೆ ಯಾವುದೇ ಬಗೆಯ ಅಡಿಕೆ ಆಮದಿಗೆ ಅನು ಮತಿ ನೀಡ ಲಾಗಿತ್ತು. ಈ ಬೆಲೆ ನಿಯಮ ಕಡ್ಡಾಯ ಅನ್ವಯ ಮಾಡಲಾಗಿತ್ತು. ಆದರೆ ಈಗ ಎಲೆಚುಕ್ಕೆ ರೋಗ, ಕೊಳೆ ರೋಗ, ಅತಿಯಾದ ಮಳೆಯಿಂದ ಈ ಬಾರಿ ಅಡಿಕೆ ಉತ್ಪಾದನೆ ಕುಂಠಿತಗೊಂಡ ಸಂದರ್ಭದಲ್ಲೇ ಭೂತಾನ್‌ನಿಂದ ಅಡಿಕೆ ಆಮದು ಮಾಡಿಕೊಳ್ಳಲು ನಿರ್ಧರಿಸಿರುವುದು ಅಡಿಕೆ ಬೆಳೆಗಾರರ ನಿದ್ದೆಗೆಡಿಸಿದೆ.

Vishwavani Pg.09

# ಇಂದಿನಿಂದ 22ರವರೆಗೆ ಹಲಸು ಹಣ್ಣಿನ ಉತ್ಸವ

ಬೆಂಗಳೂರು: ಹಲಸಿನ ಹಣ್ಣು (ಜ್ಯಾಕ್ ಫ್ರೂಟ್) ಉತ್ಸವವನ್ನು ಸೆ.20 ರಿಂದ 22 ರವರೆಗೆ ಜೆಪಿ ನಗರದ ಇಂಡಿಯನ್ ಎಕ್ಸ್ ಪೀರಿಯನ್ಸ್ ಮ್ಯೂಸಿಯಂ ಮತ್ತು ಎಂಎಲ್ಆರ್ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಲಾಗಿದೆ.



ಉತ್ಸವದಲ್ಲಿ ಸೃಷ್ಟಿ ಸ್ಪೆಷಲ್ ಅಕಾಡೆಮಿ ವಿದ್ಯಾರ್ಥಿಗಳು/ಕಲಾವಿದರಿಂದ ಸಂಗೀತೋತ್ಸವ ನಡೆಯಲಿದ್ದು, ಸನ್ನಿ ಸಿಂಫೋನಿ ಪ್ರದರ್ಶನವನ್ನು ಎಂಡಿ ಪಲ್ಲವಿಯವರು ನಡೆಸಿಕೊಡಲಿದ್ದಾರೆ. ಜತೆಗೆ ಸಿಂಗಿಂಗ್ ಟೂ ದ ಫ್ಯೂಚರ್ 2 ಕಾರ್ಯಕ್ರಮವನ್ನು ವಿದುಷಿ ಶುಭಾ ಮುದ್ಗಲ್ ನಡೆಸಿಕೊಡಲಿದ್ದು, ತಬಲಾ ಕಲಾವಿದ ಪಂಡಿತ್ ಅನೀಶ್ ಪ್ರಧಾನ್ ಜತೆಯಾಗಲಿದ್ದಾರೆ. ಸಂಗೀತಗಾರ ಅನಿಲ್ ಶ್ರೀನಿವಾಸನ್ ಅವರ ರ್‍ಯಾಪ್ಸೋಡಿ ಮ್ಯೂಸಿಕ್ ಫೌಂಡೇಶನ್ (ಚೆನ್ನೈ) ಮತ್ತು ಹಿಂದುಸ್ಥಾನಿ ಮ್ಯೂಸಿಕ್ ಮೇಳ (ಪುಣೆ), ವಿದುಷಿ ಅನುರಾಧಾ ಕುಬೇರ್‌ರ ಶಿಷ್ಯರು ಹಾಗೂ ಕೋಲ್ಕತ್ತಾದ (ಸೌರೇಂದ್ರೋ-ಸೌಮ್ಯೋಜಿತ್ ಅಕಾಡೆಮಿ) ಕಲಾವಿದರು ಭಾಗವಹಿ ಸಲಿದ್ದಾರೆ. ಉತ್ಸವದಲ್ಲಿ ಉದಯೋನ್ಮುಖ ಸಂಗೀತಗಾರರು ಮತ್ತು ಸಂಗೀತ ಪ್ರೇಮಿಗಳಿಗಾಗಿ ಐದು ಮುಕ್ತ ಕಮ್ಮಟ ಏರ್ಪಡಿಸಲಾಗಿದೆ. ಭೂಮಿಜಾ ಮತ್ತು ಐಎಂಇ ಅವರ ಔಟ್ ರೀಚ್ ಅಂಗವಾಗಿ ಸಂಗೀತಗಾ ರರಾದ ಪಂಡಿತ್ ಜಯಚಂದ್ರ ರಾವ್ ಮತ್ತು ವಾಸು ದೀಕ್ಷಿತ್ ಅವರು ನಾನಾ ಶೈಕ್ಷಣಿಕ ಸಂಸ್ಥೆಗಳ ಆವರಣದಲ್ಲಿ ಕಮ್ಮಟಗಳನ್ನು ನಡೆಸಿಕೊಡುತ್ತಾರೆ.

Udayavani Pg.02

# ನಾಳೆ ರೇಷ್ಮೆ ಮಂಡಳಿಯ ಅಮೃತ ಮಹೋತ್ಸವ ಕಾರ್ಯಕ್ರಮ

ಬೆಂಗಳೂರು: ಕೇಂದ್ರ ರೇಷ್ಮೆ ಮಂಡಳಿ 75 ವರ್ಷದ ಪೂರೈಸಿದ ಹಿನ್ನೆಲೆಯಲ್ಲಿ ಶನಿವಾರ ಮಧ್ಯಾಹ್ನ 2.30ಕ್ಕೆ ಜಿಕೆವಿಕೆ ಡಾ. ಬಾಬು ರಾಜೇಂದ್ರ ಪ್ರಸಾದ್ ಸಭಾಂಗಣದಲ್ಲಿ 'ರೇಷ್ಮೆ ಕೃಷಿ-ಪಾಲುದಾರ' ಸಭೆ ಹಾಗೂ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ಕೇಂದ್ರ ರೇಷ್ಮೆ ಮಂಡಳಿಯ ಸದಸ್ಯ ಕಾರ್ಯದರ್ಶಿ ಪಿ.ಶಿವಕುಮಾರ್ ತಿಳಿಸಿದರು.ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್ ಉದ್ಘಾಟಿಸಲಿದ್ದಾರೆ. ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿ.ಸೋಮಣ್ಣ, ರಾಜ್ಯ ಪಶುಸಂಗೋಪನೆ ಇಲಾಖೆ ರಾಜ್ಯ ಸಚಿವ ಕೆ. ವೆಂಕಟೇಶ್, ಸಂಸದ ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ ಅವರು ಭಾಗವಹಿಸಲಿದ್ದಾರೆ ಎಂದರು.

# IISc team finds nanomaterial-based solution to treat groundwater

EXPRESS NEWS SERVICE
@ Bengaluru

IN a bid to address the rising concerns surrounding ground water contamination and the presence of heavy metals in water bodies, researchers from the Indian Institute of Science (IISc), Bengaluru, have developed a nanomaterial-based solution that can reduce the presence of heavy metals, like chromium, in groundwater.

Unlike conventional methods, where groundwater is pumped out and then purified using chemical precipitation, absorption, ion exchange and reverse osmosis at different locations, the IISc researchers proposed an on-site alternative which involves using iron nanoparticles that remediate the heavy metals.

"If the groundwater is contaminated, we can inject these nanoparticles into the subsurface groundwater region, where it will react with the chromium and immobilise it, resulting in clear water," said Prathima Basavaraju, PhD student at Centre for Sustainable Technologies (CST) and lead author of the study. Researchers in the report suggested that the synthesising nanoparticles consisting of nano zero-valent iron (nZVI), along with carboxymethyl cellulose, is promising material for on-site remediation of chromium-contaminated groundwater.



EXPRESS ILLUSTRATION

"Places like Bellandur Lake have a lot of contaminated sediments, and this technique can prove quite useful in remediating contaminants such as cadmium, nickel and chromium in contaminated sediments of the water body," said GL Sivakumar Babu, Professor at CiE and CST, and co-author of the study.

The paper has also been published in the Journal of Water Process Engineering.

Prathima added that chromium enters soil and groundwater through effluents from industries, such as leather tanning, electroplating, and textile manufacturing. Heavy metals enter the environment because of urbanisation and mismanagement by industries.

Indian Express Pg.05

### ಸಮೀಕ್ಷೆಗೆ ಸೆ.30 ಕೊನೆ ದಿನ, ಶೇ.52 ಮಾತ್ರ ಪ್ರಗತಿ

# ಬೆಳೆ ಸಮೀಕ್ಷೆ ಪ್ರಗತಿ ಕುಂಠಿತ

• ವೀರಣ್ಣ ಬಳಿಗಾರ



**ಬೆಂಗಳೂರು:** ರೈತರೆ ಬೆಳೆ ಮಾಹಿತಿಯನ್ನು ಛಾಯಾಚಿತ್ರ ಸಹಿತ ಸ್ವಯಂ ದಾಖಲಿಸುವ ಮುಂಗಾರು ಹಂಗಾಮಿನ 2024-25ನೇ ಸಾಲಿನ ಬೆಳೆ ಸಮೀಕ್ಷೆ ನಿಧಾನಗತಿಯಲ್ಲಿ ಸಾಗುತ್ತಿದ್ದು, ರಾಜ್ಯದಲ್ಲಿ ಶೇ.52 ರಷ್ಟು ಪ್ರಗತಿಯಾಗಿದೆ. ಸಮೀಕ್ಷೆಗೆ ಹಿನ್ನಡೆಯಾಗಿದೆ.

ಬೆಳೆ ಸಮೀಕ್ಷೆಯ ಆ್ಯಪ್‌ನ ಹಲವು ನ್ಯೂನ್ಯತೆಗಳಿಂದ ಪ್ರಸ್ತುತ ವರ್ಷದಲ್ಲಿ ರೈತರು ಸಮೀಕ್ಷೆಗೆ ಆಸಕ್ತಿ ವಹಿಸದ ಕಾರಣ ಬೆಳೆ ಸಮೀಕ್ಷೆ ಸಾಧನೆ ಕುಂಠಿತವಾಗಿದೆ ಎಂಬುದು ರೈತರ ಅಭಿಪ್ರಾಯವಾಗಿದೆ. ಬೆಳೆ ಸಮೀಕ್ಷೆಗೆ ಸೆ.30 ಕೊನೆಯ ದಿನವಾಗಿದ್ದು, ರಾಜ್ಯದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿಯಾಗಿಲ್ಲ. ಅಂತಿಮ ಗಡುವು ವಿಸ್ತರಿಸಿದರೆ ಮಾತ್ರ ಉತ್ತಮ ಸಾಧನೆ ಮಾಡಲು ಸಾಧ್ಯವಿದೆ. ರೈತರು ತಮ್ಮ ಆಂಡ್ರಾಯ್ಡ್ ಮೊಬೈಲ್‌ನ ಮೂಲಕ ತಮ್ಮ ಜಮೀನಿನ ಬೆಳೆ ಸಮೀಕ್ಷೆ ಕೈಗೊಳ್ಳಲು ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ಪ್ಲೇ ಸ್ಟೋರ್‌ನಲ್ಲಿ ಡೌನ್ಲೋಡ್ ಮಾಡಿಕೊಂಡು ಸಮೀಕ್ಷೆ ನಡೆಸಬೇಕು. ಜಂಟಿ ಖಾತೆ ಹೊಂದಿದ ರೈತರಿಗೆ ಆಯಾ ಗ್ರಾಮಗಳಿಗೆ ಕಂದಾಯ ಇಲಾಖೆಯಿಂದ ನಿಯೋಜಿಸಲಾದ ಖಾಸಗಿ ನಿವಾಸಿ (ಪಿಆರ್)ಗಳ ಮೂಲಕ ಬೆಳೆ ಸಮೀಕ್ಷೆ ಮಾಡಿಸಲು ಅವಕಾಶವಿದೆ. ಆದರೆ ಅದು ಕೂಡಾ ಸರಿಯಾಗಿ ಕಾರ್ಯ ಸಾಗುತ್ತಿಲ್ಲ.

➡ 9

> "ರಾಜ್ಯದಲ್ಲಿ ಶೇ.52 ರಷ್ಟು ಬೆಳೆ ಸಮೀಕ್ಷೆಯಾಗಿದ್ದು, ಇನ್ನೂ ಅರ್ಧದಷ್ಟು ಸಮೀಕ್ಷೆ ಬಾಕಿ ಇರುವುದರಿಂದ ಮುಂಗಾರು ಬೆಳೆ ಸಮೀಕ್ಷೆ ಅವಧಿ ವಿಸ್ತರಿಸುವ ಕುರಿತು ಸೆ.29 ರಂದು ತೀರ್ಮಾನ ಕೈಗೊಳ್ಳಲಾಗುವುದು. ಮುಂಗಾರು ಮುಗಿದರೂ ಆ್ಯಪ್ ಬಂದ್ ಮಾಡುವುದಿಲ್ಲ. ಸಮೀಕ್ಷೆಗೆ ಅವಕಾಶ ನೀಡಲಾಗುವುದು.
>
> ■ ವೈ.ಎಸ್. ಪಾಟೀಲ್, ಕೃಷಿ ಇಲಾಖೆ ಆಯುಕ್ತ

**ಅಗ್ರಸ್ಥಾನದಲ್ಲಿ ವಿಜಯಪುರ ಜಿಲ್ಲೆ** • ಪುಟ 9

Hosadigantha
Pg.01,02

# ಬೆಳೆ ಸಮೀಕ್ಷೆ ಪ್ರಗತಿ ಕುಂಠಿತ

➡ 1 ಬೆಳೆ ಸಾಲ, ಬೆಳೆ ವಿಮೆ, ಬೆಳೆ ಹಾನಿ ಪರಿಹಾರ, ಕನಿಷ್ಠ ಬೆಂಬಲ ಬೆಲೆ ಯೋಜನೆಯ ಪ್ರಯೋಜನ ಪಡೆಯುವುದು ಸೇರಿದಂತೆ ಕೃಷಿ ಹಾಗೂ ವಿವಿಧ ಇಲಾಖೆಗಳ ಸವಲತ್ತು ಪಡೆಯಲು ಹಾಗೂ ಪಹಣಿಯಲ್ಲಿ ಬೆಳೆ ದಾಖಲಿಸಲು ಬೆಳೆಗಳ ವಿವರಗಳನ್ನು ಅಪ್ ಲೋಡ್ ಮಾಡುವುದು ಅಗತ್ಯವಾಗಿದ್ದು, ರಾಜ್ಯದಲ್ಲಿ ಅರ್ಧದಷ್ಟು ರೈತರು ಮುಂಗಾರು ಬೆಳೆ ಸಮೀಕ್ಷೆ ಕೈಗೊಳ್ಳದ ಕಾರಣದಿಂದ ಸಮೀಕ್ಷೆ ದಿನಾಂಕ ಮುಂದೂಡಬೇಕೆಂಬುದು ರೈತರ ಒತ್ತಾಯವಾಗಿದೆ.

## ಅಗ್ರಸ್ಥಾನದಲ್ಲಿ ವಿಜಯಪುರ ಜಿಲ್ಲೆ

ರಾಜ್ಯದಲ್ಲಿ ಸದ್ಯಕ್ಕೆ ವಿಜಯಪುರ ಜಿಲ್ಲೆ ಶೇ.69.47 ಪ್ರಗತಿ ಸಾಧಿಸಿ ಅಗ್ರಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ದಾವಣಗೆರೆ ಶೇ.62.76, ಬೀದರ್ ಶೇ.60.18, ಯಾದಗಿರಿ ಶೇ.58.92, ಬಳ್ಳಾರಿ ಶೇ.57.45, ಚಿತ್ರದುರ್ಗ ಶೇ.56.43, ಚಿಕ್ಕಬಳ್ಳಾಪುರ ಶೇ.53.30, ವಿಜಯನಗರ ಶೇ.52.10, ಬೆಳಗಾವಿ ಶೇ.46.71 ಕೊಡಗು ಶೇ.45.79, ಕೊಪ್ಪಳ ಶೇ.41.53, ಕಲಬುರಗಿ ಶೇ.41.22, ಶಿವಮೊಗ್ಗ ಶೇ.39.35, ಬೆಂಗಳೂರು ಗ್ರಾ. ಶೇ.39.25, ಉತ್ತರಕನ್ನಡ ಶೇ.38.30, ರಾಯಚೂರು ಶೇ.38.21, ಬೆಂಗಳೂರು ನಗರ ಶೇ.34.22, ಕೋಲಾರ ಶೇ.28.13 ತುಮಕೂರು ಶೇ.26.41, ಹಾಸನ ಶೇ.24.26, ಧಾರವಾಡ ಶೇ.21.17, ಚಿಕ್ಕಮಗಳೂರು ಶೇ.15.10, ರಾಮನಗರ ಶೇ.13.91, ಮಂಡ್ಯ, ಮೈಸೂರು, ಚಾಮರಾಜನಗರ, ಹಾವೇರಿ, ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಪೂರ್ವ ಮುಂಗಾರು ಬೆಳೆ ಸಮೀಕ್ಷೆ ನಡೆಯುವುದರಿಂದ ಪ್ರಸ್ತುತ ಬೆಳೆ ಸಮೀಕ್ಷೆ ಗಣನೆಗೆ ಬರುವುದಿಲ್ಲ.

> "ಬೆಳೆ ಸಮೀಕ್ಷೆ ಆ್ಯಪ್ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಎಐ(ಕೃತಕ ಬುದ್ಧಿಮತ್ತೆ) ಅಳವಡಿಸಿದ್ದರೂ ನೂತನ ಆ್ಯಪ್ ರೈತರ ಸ್ನೇಹಿಯಾಗಿಲ್ಲ. ಜಮೀನಿನಲ್ಲಿ ಜಿಪಿಎಸ್ ಸಂಪರ್ಕಕ್ಕೆ ಸಿಗುತ್ತಿಲ್ಲ. ಫೋಟೋ ಅಪ್ಲೋಡ್ ಆಗುತ್ತಿಲ್ಲ. ಎಲ್ಲಾ ರೈತರ ಹತ್ತಿರ ಸ್ಮಾರ್ಟ್‌ಫೋನ್ ಇಲ್ಲ. ಸಮೀಕ್ಷೆಗೆ ಖಾಸಗಿ ಪಿ.ಆರ್‌ಗಳು ಹೆಚ್ಚಿನ ಹಣ ಕೇಳುತ್ತಾರೆ. ಇದರಿಂದ ಸಮೀಕ್ಷೆ ಹಿನ್ನಡೆಯಾಗಿದೆ.
>
> ■ ಗುರುರಾಜ, ರೈತ